**ದಿನಾಂಕಃ 05-04-2024 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

6. ಫಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿ ಸೂಕ್ಷ್ಮ ರಾಸಾಯನಿಕ ವಸ್ತುಗಳು ಎಂದರೆ ಹೌದು . ಸದರಿ ವಸ್ತುವನ್ನು ನಾನು ಖರೀದಿ ಮಾಡುವುದಿಲ್ಲ.

ಪ್ರಶ್ನೆಃ ಫಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ನಿಮ್ಮ ಕಚೇರಿಯಲ್ಲಿ ಯಾರು ಖರೀದಿ ಮಾಡುತ್ತಾರೆ ?
ಉತ್ತರಃ ಮೇಲಾಧಿಕಾರಿಗಳು ಡಿ ವೈ ಎಸ್ ಪಿ ರವರು .

ಪ್ರಶ್ನೆಃ ಆ ದಿನ ನಮ್ಮ ಠಾಣೆಯಲ್ಲಿ ಫಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿ ಇತ್ತು ಎಂದು ತೋರಿಸಲು ಏನಾದರೂ ದಾಖಲಾತಿ ಇದೆಯಾ?
ಉತ್ತರಃ ದಾಖಲಾತಿ ಇರುವುದಿಲ್ಲ ಅಧಿಕಾರಿಗಳ ಬಳಿ ಇರುತ್ತದೆ .

7. ಆ ದಿನ ನಮ್ಮ ಠಾಣೆಯಲ್ಲಿ ಫಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿ ಇರಲೇ ಇಲ್ಲ ಎಂದರೆ ಸರಿಯಲ್ಲ. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಯಾವುದೇ ರಾಸಾಯನಿಕ ಪುಡಿಗಳನ್ನು ಜಪ್ತು ಮಾಡಿಲ್ಲ ಎಂದರೆ ಹೌದು . ಯಾವುದೇ ವಸ್ತುಗಳಿಗೆ ಯಾವುದೇ ಗುರುತಿನ ಚೀಟಿ ಅಂಟಿಸಿಲ್ಲ ಎಂದರೆ ಸರಿಯಲ್ಲ. ಆರಕ್ಷಕ ಉಪಾಧೀಕ್ಷಕರು ಮತ್ತು ಪಂಚರ ಸಹಿ ಹಾಕಿದ ಗುರುತಿನ ಚೀಟಿಗಳನ್ನು ಅಂಟಿಸಿದ್ದಾರೆ. ನೋಟುಗಳಿಗೆ ಯಾರೂ ಫಿನಾಪ್ತಲಿನ್ ಪುಡಿ ಸವರಿಲ್ಲ ಎಂದರೆ ಸರಿಯಲ್ಲ. ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರು ಮಾಡಲಿಲ್ಲ ಎಂದರೆ ಸರಿಯಲ್ಲ. ಪ್ರಾಯೋಗಿಕ ಪಂಚನಾಮೆ ಮಾಡಲಾಗಿದೆ ಎಂದು ಹೇಳಿರುವ ದಿನ ಯಾವುದೇ ಪ್ರಯೋಗವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ರಾಸಾಯನಿಕ ಪ್ರಯೋಗ ಮಾಡಿದಾಗ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಬಂತು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಎಷ್ಟು ಜನಕ್ಕೆ ತಿಳಿ ಗುಲಾಬಿ ಬಣ್ಣ ಬಂತು ಎಂದರೆ ಪಂಚ-1 ರವರು ನೋಟನ್ನು ಎಣಿಸಿದ್ದು ಅವರ ಕೈಗಳನ್ನು ತೊಳೆದಾಗ ತಿಳಿ ಗುಲಾಬಿ ಬಣ್ಣ ಬಂತು. ಆಗ ಬೇರೆ ಯಾರ ಕೈ ತೊಳೆದಾಗ ಬಣ್ಣ ಬರಲಿಲ್ಲ. ನಾನು ಡಿಜಿಟಲ್

ವಾಯ್ಸ ರೆಕಾರ್ಡರ್ ಅನ್ನು ಚಾಲು ಮಾಡಿ ನೋಡಿಲ್ಲ. ಅದನ್ನು ಹೇಗೆ ಬಂದ್ ಮಾಡಬೇಕು ಮತ್ತು ಚಾಲು ಮಾಡಬೇಕು ಎಂದು ನನಗೆ ಅಷ್ಟು ಮಾಹಿತಿ ಇಲ್ಲ. ತನಿಖಾಧಿಕಾರಿ ವಾಯ್ಸ ರೆಕಾರ್ಡರ್ ಅನ್ನು ಹೇಗೆ ಬಂದ್ ಮಾಡಬೇಕು ಮತ್ತು ಚಾಲು ಮಾಡಬೇಕು ಎಂದು ಫಿರ್ಯಾದಿಗೆ ತಿಳಿಸಿದರು. ವಾಯ್ಸ ರೆಕಾರ್ಡರ್ ನಮ್ಮ ಕಚೇರಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಅದನ್ನು ಫಿರ್ಯಾದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವುದೇ ಪ್ರಾಯೋಗಿಕ ಪಂಚನಾಮೆಯನ್ನು ಅಲ್ಲಿ ಮಾಡಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಛಾಯಾಚಿತ್ರಗಳನ್ನು ಅಲ್ಲಿ ತೆಗೆಯಲಿಲ್ಲ ಎಂದರೆ ಸರಿಯಲ್ಲ.

8. ಟ್ರ್ಯಾಪ್ ಪಂಚನಾಮೆಗೆ ಯಾವ ಯಾವ ವಸ್ತುಗಳನ್ನು ತೆಗೆದುಕೊಂಡು ಹೋದರು ಎಂದು ಪಟ್ಟಿ ಮಾಡಿಲ್ಲ. ಟ್ರ್ಯಾಪ್ ಪಂಚನಾಮೆಗೆ ಯಾವ ಯಾವ ವಸ್ತುಗಳನ್ನು ತೆಗೆದುಕೊಂಡು ಹೋದರು ಎಂದು ಟ್ರ್ಯಾಪ್ ಪಂಚನಾಮೆಯಲ್ಲಿ ಅಥವಾ ಪ್ರಾಯೋಗಿಕ ಪಂಚನಾಮೆಯಲ್ಲಿ ಬರೆದಿದ್ದಾರಾ ಎಂದರೆ ಹೋಗುವಾಗ ಒಯ್ದಿರುತ್ತೇವೆ ಎಂದು ಬರೆದಿದ್ದಾರೆ. ಆದರೆ ಯಾವುದರಲ್ಲಿ ಬರೆದಿದ್ದಾರೆ ಎಂದು ನೆನಪಿಲ್ಲ. ಅದರಲ್ಲಿ ನಾನು ಸಹಿ ಮಾಡಿಲ್ಲ. ಅದರಲ್ಲಿ ಭಟ್ಟಿ ಇಳಿಸಿದ ನೀರು, ಎರಡು ಪಿಂಗಾಣಿ ಬಟ್ಟಲು , ಸೋಡಿಯಂ ಕಾರ್ಬೋನೇಟ್ ಪುಡಿ , ಫಿನಾಪ್ತಲಿನ್ ಪುಡಿ ಒಯ್ದಿರುವುದಾಗಿ ಬರೆದಿರುತ್ತಾರೆ. ಆಗ ಒಯ್ದು ಸಾಮಾನುಗಳನ್ನೆಲ್ಲಾ ನನಗೆ ತೋರಿಸಿರುತ್ತಾರೆ. ಒಯ್ದು ಸಾಮಾನುಗಳ ಛಾಯಾಚಿತ್ರಗಳನ್ನು ತೆಗೆದಿಲ್ಲ. ನಮ್ಮ ಪೊಲೀಸ್ ನವರು ಕುಮಟಾಗೆ ಯಾವುದೇ ವಸ್ತುಗಳನ್ನು ಒಯ್ದಿಲ್ಲ ಎಂದರೆ ಸರಿಯಲ್ಲ.

9. ಕುಮಟಾದ ತಾಲೂಕು ಪಂಚಾಯತಿ ಕಚೇರಿ ಬಳಿ 15-20 ನಿಮಿಷ ಹೊರಗಡೆ ಇದ್ದೆವು. ಪೊಲೀಸ್ ನವರು ಫಿರ್ಯಾದಿಯ ಕರವಸ್ತ್ರವನ್ನು ಜಪ್ತು ಮಾಡಿರುವುದಿಲ್ಲ. ಈ ಕರವಸ್ತ್ರದಿಂದಲೇ ಸನ್ನೆ ನೀಡಿದ್ದೇನೆ ಎಂದು ಫಿರ್ಯಾದಿ ನನ್ನ ಬಳಿ ಹೇಳಿಲ್ಲ. ಆರೋಪಿ ಅಲ್ಲಿಂದ ಓಡಿ ಹೋದ ವಿಚಾರ ನನಗೆ ಎಷ್ಟು ಗಂಟೆಗೆ ಗೊತ್ತಾಯಿತು ಎಂದರೆ ಸಂಜೆ 6.35 ಇರಬಹುದು. ಆರೋಪಿಯನ್ನು ನಾವು ಸುಮಾರು 20 ನಿಮಿಷ ಅವನು ಓಡಿ ಹೋದಾಗ ಹಿಂಬಾಲಿಸಿರುತ್ತೇವೆ. ಆರೋಪಿಯು ಹೆರವಟ್ಟಾ ರೋಡಿಗೆ ಓಡಿ ಹೋದ . ಆಗ ಅವನನ್ನು ಹಿಂಬಾಲಿಸಿದೆವು . ಹೆರವಟ್ಟಾ ರಸ್ತೆಯಲ್ಲಿ ಅವನನ್ನು ಹಿಡಿದೆವು . ಸುಮಾರು ಒಂದುವರೆ ಕಿ.ಮೀ.

ನಾವು ಆರೋಪಿಯನ್ನು ಹಿಂಬಾಲಿಸಿದೆವು . ಆರೋಪಿಯು ರಾತ್ರಿ 8.40 ಗಂಟೆಗೆ ನಮಗೆ ಸಿಕ್ಕಿದ. ಸಂಜೆ 6.35 ರಿಂದ ರಾತ್ರಿ 8.40 ಗಂಟೆವರೆಗೆ ಎಷ್ಟು ಸಮಯ ಆಯಿತು ಎಂದರೆ ಮಧ್ಯದಲ್ಲಿ ಆರೋಪಿಯನ್ನು ಹುಡುಕಾಡುತ್ತಿದ್ದೆವು . ಸಂಜೆ 6.35 ರಿಂದ ರಾತ್ರಿ 8.40 ಗಂಟೆ ನಡುವೆ ಎಷ್ಟು ಸಮಯ ಇದೆ ಎಂದರೆ ಸುಮಾರು ಒಂದು ಗಂಟೆ ಇರುತ್ತದೆ . ನಾನು ಎಸ್ ಎಸ್ ಎಲ್ ಸಿ ಉತ್ತೀರ್ಣ ಆಗಿದ್ದೇನೆ. ಈಗ ಸಮಯ 1 ಗಂಟೆಗೆ 10 ನಿಮಿಷ ಇದೆ. ನನಗೆ ಸಮಯ ನಿಖರವಾಗಿ ನೋಡಿ ಹೇಳಲು ಬರುತ್ತದೆ . ನನಗೆ 38 ವರ್ಷ ಸೇವೆ ಆಗಿದೆ . ಒಂದುವರೆ ಕಿ.ಮೀ. ಹೋಗಲು ಎಷ್ಟು ಸಮಯ ಹಿಡಿಯಿತು ಎಂದರೆ ನಾವು ಹುಡುಕಾಡುತ್ತಿದ್ದೆವು ನಮಗೆ ಒಂದು ಗಂಟೆ ಸಮಯ ಹಿಡಿಯಿತು . ಆರೋಪಿ ಎಲ್ಲಿ ಹೋಗುತ್ತಿದ್ದನೋ ಅಲ್ಲಿ ನಾವು ಅವನನ್ನು ಹಿಂಬಾಲಿಸುತ್ತಿದ್ದೆವು , ಅದನ್ನೇ ನಾನು ಹುಡುಕಾಟ ಎಂದು ಹೇಳಿದ್ದೇನೆ. ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಹತ್ತಿರ ಆರೋಪಿಯನ್ನು ಹಿಡಿದೆವು . ಆರೋಪಿಯನ್ನು ಹಿಡಿದ ಜಾಗದಿಂದ ಸದರಿ ದೇವಸ್ಥಾನ ಸುಮಾರು ಅರ್ಧ ಫರ್ಲಾಂಗ್ ದೂರದಲ್ಲಿ ಇದೆ . ನಮ್ಮ ಇಲಾಖೆಯವರು ಆರೋಪಿಯನ್ನು ವೇಗವಾಗಿ ಹಿಂಬಾಲಿಸುತ್ತಿದ್ದವಾ ಅಥವಾ ನಿಧಾನವಾಗಿ ಹಿಂಬಾಲಿಸುತ್ತಿದ್ದವಾ ಎಂದರೆ ವೇಗವಾಗಿ ಹಿಂಬಾಲಿಸುತ್ತಿದ್ದೆವು . ಎರಡು ಜೀಪ್ ಮತ್ತು ಒಂದು ಬೈಕ್ ನಲ್ಲಿ ನಾವು ಹಿಂಬಾಲಿಸುತ್ತಿದ್ದೆವು . ಬೈಕ್ ನಲ್ಲಿ ಮಂಜುನಾಥ ಪಟಗಾರ ಮತ್ತು ಸುದರ್ಶನ ನಾಯ್ಕ ಇದ್ದರು. ಫಿರ್ಯಾದುದಾರ ಆರಕ್ಷಕ ಉಪಾಧೀಕ್ಷಕರ ಜೀಪಿನಲ್ಲಿ ಇದ್ದರು. ನಾನು ಮತ್ತೊಂದು ಇಲಾಖಾ ಜೀಪ್ ನಲ್ಲಿ ಇದ್ದೆ. ದೇವಸ್ಥಾನದ ಹತ್ತಿರ ಎಷ್ಟು ಸಮಯ ಕಳೆದೆವು ಎಂದರೆ ಜಾಸ್ತಿ ಸಮಯ ಕಳೆಯಲಿಲ್ಲ. ಸುಮಾರು 15-20 ನಿಮಿಷ ಅಲ್ಲಿ ಕಳೆದೆವು . ಅಲ್ಲಿ 15-20 ಏನು ಮಾಡಿದೆವು ಎಂದರೆ ಆರೋಪಿಯನ್ನು ಆರಕ್ಷಕ ಉಪಾಧೀಕ್ಷಕರು ಕೇಳಿದರು. ಅವರ ಗುರುತಿನ ಚೀಟಿಯನ್ನು ಆರೋಪಿಗೆ ತೋರಿಸಿದರು ಮತ್ತು ಆರೋಪಿಯ ಕೈಗಳನ್ನು ಹಿಡಿದುಕೊಳ್ಳಲು ಆರಕ್ಷಕ ಉಪಾಧೀಕ್ಷಕರು ಚಂದನ್ ಮತ್ತು ರಾಮದಾಸ ಆಚಾರಿರವರಿಗೆ ಹೇಳಿದರು. ಅಲ್ಲಿಂದ ಪ್ರವಾಸಿ ಮಂದಿರಕ್ಕೆ ಒಂದು ಕಿ.ಮೀ. ಒಳಗಡೆ ಅಂತರ ಇದೆ. ಪ್ರವಾಸಿ ಮಂದಿರ ತಲುಪಲು 15-20 ನಿಮಿಷ ಹಿಡಿದಿರುತ್ತದೆ . ಆರೋಪಿಯನ್ನು ಚಂದನ್ ಮತ್ತು ರಾಮದಾಸ ಆಚಾರಿ ಹಾಗೂ ಆರಕ್ಷಕ ಉಪಾಧೀಕ್ಷಕರು ಇದ್ದ ಜೀಪ್ ನಲ್ಲಿ ಕರೆದುಕೊಂಡು ಹೋದರು. ಆರೋಪಿ ಕುಳಿತಿದ್ದ ವಾಹನದಲ್ಲಿ ಒಟ್ಟು 5 ಜನ ಇದ್ದರು. ಒಂದೇ ವಾಹನದಲ್ಲಿ

ಐದು ಜನ ಕುಳಿತು ಹೋದಾಗ ಒಬ್ಬರ ಮೈ ಇನ್ನೊಬ್ಬರಿಗೆ ತಾಗುವ ಸಾಧ್ಯತೆ ಇದೆ ಎಂದರೆ ಹೌದು. ಆರೋಪಿಯನ್ನು ಮೊದಲಿಗೆ ಬೆನ್ನಟ್ಟಿದಾಗ ಒಂದೇ ರಸ್ತೆಯಲ್ಲಿ ಹೋದೆವಾ ಅಥವಾ ಬೇರೆ ಬೇರೆ ರಸ್ತೆಯಲ್ಲಿ ಹೋದೆವಾ ಎಂದರೆ ಒಂದೇ ರಸ್ತೆಯಲ್ಲಿ ಹೋದೆವು . ಯಾವ ರಸ್ತೆಯಲ್ಲಿ ಆರೋಪಿಯನ್ನು ಬೆನ್ನಟ್ಟಿದೆವು ಎಂದು ಪಂಚನಾಮೆಯಲ್ಲಿ ಬರೆದಿದ್ದಾರೆ. ತಾಲೂಕು ಪಂಚಾಯತಿಯಿಂದ ಹೆರವಟ್ಟಾ ರಸ್ತೆಯಲ್ಲಿ ಬೆನ್ನಟ್ಟಿದ್ದಾಗಿ ಬರೆದಿದ್ದಾರೆ. ಆರೋಪಿಯನ್ನು ಬೆನ್ನಟ್ಟಿದೆವು ಮತ್ತು ದೇವಸ್ಥಾನದ ಹತ್ತಿರ ಅವನು ಸಿಕ್ಕಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತನ್ನ ಪ್ಯಾಂಟಿನ ಜೇಬಿನಿಂದ ಹಣ ತೆಗೆದು ಗಿಡಗಂಟಿಯಲ್ಲಿ ಬಿಸಾಡಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಿಡಗಂಟಿಗಳಿಂದ ಅಲ್ಲಿ ಹಣ ಬಿಸಾಡಿದ ಮೇಲೆ ಆ ಹಣವನ್ನು ಪಂಚ–1 ರವರು ತೆಗೆದರು. ದೇವಸ್ಥಾನದಿಂದ ಪ್ರವಾಸಿ ಮಂದಿರಕ್ಕೆ ಹೋದಾಗ ಪಂಚ–1 ಇನ್ನೊಂದು ಇಲಾಖಾ ವಾಹನದಲ್ಲಿ ಬಂದ . ದೇವಸ್ಥಾನದ ಹತ್ತಿರ ಪಂಚ–1 ರವರ ಕೈಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದ್ದಾರಾ ಎಂದರೆ ಇಲ್ಲ. ಪಂಚ–1 ರವರ ಕೈಯನ್ನು ದೇವಸ್ಥಾನದ ಬಳಿ ಸೋಪಿನಿಂದ ತೊಳೆಸಿಲ್ಲ. ಪಂಚ–1 ರವರನ್ನು ನೋಟು ತೆಗೆದ ನಂತರ ಪ್ರತ್ಯೇಕವಾಗಿ ವಾಹನದಲ್ಲಿ ಕುಳ್ಳಿಸಲಿಲ್ಲ ಎಂದರೆ ಹೌದು . ಪ್ರವಾಸಿ ಮಂದಿರದಲ್ಲಿ ರಾತ್ರಿ 8.40 ಗಂಟೆಯಿಂದ ದಿನಾಂಕ 17.09.2013 ರ ಬೆಳಿಗ್ಗೆ 1.00 ಗಂಟೆವರೆಗೆ ಇದ್ದೆವು. ಆಗ ಪ್ರವಾಸಿ ಮಂದಿರದಲ್ಲಿ ಪ್ರವಾಸಿ ಮಂದಿರದ ಅಧಿಕಾರಿಗಳು ಯಾರೂ ಇರಲಿಲ್ಲ. ಯಾವುದೇ ಪ್ರವಾಸಿ ಮಂದಿರಕ್ಕೆ ಹೋಗಬೇಕಾದರೆ ಅಲ್ಲಿನ ಅಧಿಕಾರಿಯ ಅನುಮತಿ ಬೇಕು ಎಂದರೆ ಆರಕ್ಷಕ ಉಪಾಧೀಕ್ಷಕರು ಅನುಮತಿ ತೆಗೆದುಕೊಂಡಿರಬಹುದು . ಪ್ರವಾಸಿ ಮಂದಿರದಲ್ಲಿ ಅಲ್ಲಿ ದೇಖರೇಖೆ ನೋಡಿಕೊಳ್ಳುವ ಸಿಬ್ಬಂದಿ ಇರುತ್ತಾರೆ ಎಂದರೆ ಯಾರೋ ಒಬ್ಬರು ಇದ್ದರು. ಪ್ರವಾಸಿ ಮಂದಿರದಲ್ಲಿ ಪಂಚನಾಮೆ ಮಾಡಿದ ಬಗ್ಗೆ ಆ ವ್ಯಕ್ತಿಯ ಸಹಿಯನ್ನು ಪಡೆದಿದ್ದಾರಾ ಎಂದು ಗೊತ್ತಿಲ್ಲ. ಪ್ರವಾಸಿ ಮಂದಿರದಲ್ಲಿ ಕೊಠಡಿಯನ್ನು ತೆಗೆದುಕೊಂಡಿರಲಿಲ್ಲ ಅಲ್ಲಿ ಒಂದು ಹಾಲ್ ನಲ್ಲಿ ಪಂಚನಾಮೆ ಮಾಡಿದರು. ಪ್ರವಾಸಿ ಮಂದಿರದಲ್ಲಿ ಯಾವ ಉದ್ದೇಶಕ್ಕೆ ಹೋಗಿದ್ದೇವೆ ಎಂದು ಅಲ್ಲಿ ಇಟ್ಟಿರುವ ವಹಿಯಲ್ಲಿ ಬರೆಯಬೇಕಾಗುತ್ತದೆ ಎಂದರೆ ಹೌದು . ನಾನ ಮತ್ತು ನನ್ನ ಅಧಿಕಾರಿ ಆ ವಹಿಯಲ್ಲಿ ಆ ದಿನ ಬರೆದಿದ್ದೆವಾ ಎಂದರೆ ನಾನು ಬರೆದಿಲ್ಲ ನನ್ನ ಅಧಿಕಾರಿಗಳು ಬರೆದಿರಬಹುದು . ಅಲ್ಲಿ ನೋಟುಗಳನ್ನು ಪಂಚ–1 ತೆಗೆದ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿಂದ ಪ್ರವಾಸಿ ಮಂದಿರಕ್ಕೆ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿನಾಪ್ತಲಿನ್ ಹಚ್ಚಿದ ನೋಟುಗಳನ್ನು ಕಿಸೆಯಲ್ಲಿ ಇಟ್ಟುಕೊಂಡಾಗ ಮತ್ತು ಆ ಕಿಸೆಯನ್ನು ತೊಳೆದಾಗ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಬರುತ್ತದೆ ಎಂದರೆ ಹೌದು . ಪ್ರವಾಸಿ ಮಂದಿರದಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿದರು ಮತ್ತು ಅಲ್ಲಿ ಆರೋಪಿಯ ಕೈಗಳನ್ನು ಅದರಲ್ಲಿ ಅದ್ದಿಸಿ ತೊಳೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೇವಸ್ಥಾನದ ಹತ್ತಿರ ಆರೋಪಿಯನ್ನು ಹಿಡಿದಾಗ ಗೌಜಿ ಗದ್ದಲ ಆಯಿತಾ ಎಂದರೆ ಅಂತಹದ್ದೇನು ಆಗಿರಲಿಲ್ಲ. ಅಲ್ಲಿ ಅಕ್ಕಪಕ್ಕದಲ್ಲಿ ಮನೆಗಳು ಇರಲಿಲ್ಲ ದೂರದಲ್ಲಿ ಇದ್ದವು . 100 ಮೀಟರ್ ದೂರದಲ್ಲಿ ಇತ್ತಾ ಎಂದರೆ ಸುಮಾರು 200 ಮೀಟರ್ ದೂರದಲ್ಲಿ ಇದ್ದವು . ಅಲ್ಲಿ ಸಾರ್ವಜನಿಕರು ತಿರುಗಾಡುತ್ತಿದ್ದರು. ಅಲ್ಲಿ ಜನರು ಯಾರೂ ಸೇರಲಿಲ್ಲ. ದೇವಸ್ಥಾನದ ಹತ್ತಿರ ಹಣ ತೆಗೆದ ಜಾಗದಲ್ಲಿ ಪಂಚನಾಮೆಯನ್ನು ಮಾಡಿದರಾ ಎಂದರೆ ನಾನು ನೋಡಲಿಲ್ಲ ಆಗ ನಾನು ದೂರದಲ್ಲಿ ಇದ್ದೆ. ನಾನು 200 ಮೀಟರ್ ದೂರದಲ್ಲಿ ಇದ್ದೆನಾ ಎಂದರೆ ಹೌದು. ಅಧಿಕಾರಿಗಳು ಆರೋಪಿಯನ್ನು ಹಿಡಿದಾಗಲೇ ನಾನು 200 ಮೀಟರ್ ದೂರದಲ್ಲಿ ಜನ ಯಾರಾದರೂ ಬರಬಹುದು ಎಂದು ಅವರನ್ನು ತಡೆಯಲು ನನ್ನನ್ನು ನೇಮಿಸಿದ್ದರು. 200 ಮೀಟರ್ ದೂರದಲ್ಲಿ ನಾನು 10-15 ನಿಮಿಷ ಇದ್ದೆ. ನನ್ನ ಜೊತೆ ಆ ರೀತಿ 200 ಮೀಟರ್ ದೂರದಲ್ಲಿ ಸುದರ್ಶನ ನಾಯ್ಕ ಇದ್ದ. ಆ ದಿನ ನಾನು ಕುಮಟಾಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಯಾವುದೇ ರಾಸಾಯನಿಕ ಪ್ರಯೋಗ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಯಾವುದೇ ಚೀಟಿಗಳನ್ನು ಅಂಟಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಅವನ ಹಿರೋ ಹೊಂಡಾ ಬೈಕ್ ನಿಂದ ದಾಖಲಾತಿಗಳನ್ನು ಹಾಜರುಪಡಿಸಿದ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ದಾಖಲಾತಿ ಹಾಜರುಪಡಿಸುವಾಗ ಛಾಯಾಚಿತ್ರ ತೆಗೆದಿದ್ದಾರಾ ಎಂದು ಗೊತ್ತಿಲ್ಲ. ಆರೋಪಿ ದಾಖಲಾತಿಗಳನ್ನು ಎಲ್ಲಿ ಹಾಜರುಪಡಿಸಿದ ಎಂದರೆ ಪ್ರವಾಸಿ ಮಂದಿರದ ಹತ್ತಿರ ಹಾಜರುಪಡಿಸಿದ . ವಾಯ್ಸು ರೆಕಾರ್ಡರ್ ನಲ್ಲಿ ಸಂಭಾಷಣೆ ಸ್ಪಷ್ಟವಾಗಿ ಇರಲಿಲ್ಲ ಎಂದು ಹೇಳಿದ್ದು ಅದರಲ್ಲಿ ಮಾತನಾಡಿರುವುದು ಕೇಳಿಸುತ್ತಿತ್ತಾ ಎಂದರೆ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. ಸ್ವಲ್ಪ

ಸ್ವಲ್ಪ ಕೇಳಿಸುತ್ತಿತ್ತಾ ಎಂದರೆ ಸೌಂಡ್ ಬರುತ್ತಿತ್ತು . ನನಗೆ ಅದರಲ್ಲಿ ನಾಲ್ಕು ಶಬ್ದವಾದರೂ ಕೇಳಿಸಿದೆಯಾ ಎಂದರೆ ಸ್ಪಷ್ಟವಾಗಿ ಕೇಳಿಸಿರುವುದಿಲ್ಲ. ಸಂಭಾಷಣೆ ಸ್ಪಷ್ಟವಾಗಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರವಾಸಿ ಮಂದಿರದಲ್ಲಿ ಯಾವುದೇ ಉಕ್ತ ಲೇಖನ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವುದೇ ಬೆರಳಚ್ಚು ಮಾಡಿಲ್ಲ ಮತ್ತು ಮುದ್ರಣ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ಅಲ್ಲಿಂದ ತಾಲೂಕು ಪಂಚಾಯತಿ ಕಚೇರಿ ಬಳಿ ಹೋದೆನಾ ಎಂದರೆ ಪ್ರವಾಸಿ ಮಂದಿರದಿಂದ ನಾನು ಅಲ್ಲಿಗೆ ಹೋಗಿಲ್ಲ. ಪ್ರವಾಸಿ ಮಂದಿರದಲ್ಲಿ ನಾನು ಬೇರೆ ಕೊಠಡಿಯಲ್ಲಿ ಇರಲಿಲ್ಲ ಎಲ್ಲರ ಜೊತೆ ಹಾಲ್ ನಲ್ಲಿ ಇದ್ದೆ. ಬೇರೆ ಅಧಿಕಾರಿಗಳು ಯಾರೂ ತಾಲೂಕು ಪಂಚಾಯತಿ ಕಚೇರಿಗೆ ಹೋಗಲಿಲ್ಲ. ಆರೋಪಿಯನ್ನು ಅಲ್ಲಿಗೆ ಕರೆದುಕೊಂಡು ಹೋಗಲಿಲ್ಲ. ಪ್ರಾಯೋಗಿಕ ಮತ್ತು ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಜಪ್ತು ಮಾಡಲಾಯಿತು ಎಂದು ಹೇಳಿರುವ ವಸ್ತುಗಳಿಗೂ ಮತ್ತು ಆರೋಪಿಗೂ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ತಾಬೆಯಿಂದ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ತಾಬಾದಿಂದ ನೋಟುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ನವರು ಪ್ರಾಯೋಗಿಕ ಮತ್ತು ಟ್ರ್ಯಾಪ್ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಹಿರಿಯ ಅಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷೆಗೆ ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದೆವು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ